# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಅಕ್ಟೋಬರ್ 20, 2020

ಸಂಪುಟ : 47 ಸಂಚಿಕೆ : 171 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com




**ಕೋವಿಡ್ ದುರ್ಗೆ ...**

ಪಶ್ಚಿಮ ಬಂಗಾಳದಲ್ಲಿ ದುರ್ಗಾ ಪೂಜೆ ಸಂಭ್ರಮದಿಂದ ನಡೆಯುತ್ತಿದ್ದು, ವೈದ್ಯೆ ರೂಪದ ದುರ್ಗಾ ದೇವಿಯು ಕೊರೊನಾ ವೈರಸ್ ನಿಗ್ರಹಿಸುತ್ತಿರುವ ಮೂರ್ತಿಯನ್ನು ಕೊಲ್ಕೊತ್ತಾದಲ್ಲಿ ಪ್ರತಿಷ್ಠಾಪಿಸಲಾಗಿದ್ದು, ಈ ಚಿತ್ರ ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿದೆ.

# ದೇಶದ 39 ಕೋಟಿ ಜನಕ್ಕೆ ಕೊರೊನಾ

ಮುಂಬೈ, ಅ. 19 - ದೇಶದಲ್ಲಿ ಈಗಾಗಲೇ 39 ಕೋಟಿಯಷ್ಟು ಜನರಿಗೆ ಕೊರೊನಾ ಸೋಂಕು ಬಂದಿದೆ ಎಂದು ಕೇಂದ್ರ ಸರ್ಕಾರ ಕೊರೊನಾಗೆ ಸಂಬಂಧಿಸಿದಂತೆ ರೂಪಿಸಲಾಗಿದ್ದ ಸಮಿತಿಯ ಸದಸ್ಯರೊಬ್ಬರು ಹೇಳಿದ್ದಾರೆ.

ನಮ್ಮ ಗಣಿತ ಮಾದರಿಯ ಲೆಕ್ಕಾಚಾರದ ಪ್ರಕಾರ ದೇಶದ ಶೇ.30ರಷ್ಟು ಜನರಿಗೆ ಕೊರೊನಾ ಸೋಂಕು ಬಂದಿದೆ. ಇದು ಮುಂದಿನ ವರ್ಷ ಫೆಬ್ರವರಿಯಲ್ಲಿ ಶೇ.50ಕ್ಕೆ ತಲುಪಬಹುದು ಎಂದು ಸಮಿತಿ ಸದಸ್ಯರೂ ಆಗಿರುವ ಐಐಟಿ ಕಾನ್‌ಪುರದ ಉಪನ್ಯಾಸಕ ಮನೀಂದ್ರ ಅಗರ್‌ವಾಲ್ ಹೇಳಿದ್ದಾರೆ. ಕೊರೊನಾ ಸೋಂಕು ಹರಡುವ ಅಂದಾಜಿನ ಕುರಿತು ವರದಿ ನೀಡಲು ಸರ್ಕಾರ ಸಮಿತಿ ರೂಪಿಸಿತ್ತು.

ಇದುವರೆಗೂ ನಡೆಸಲಾದ ಕೊರೊನಾ ಟೆಸ್ಟ್ ಅನ್ವಯ ಸುಮಾರು 75 ಲಕ್ಷ ಜನರಿಗೆ ಕೊರೊನಾ ಸೋಂಕು ಬಂದಿದೆ. ಸೆರೋ ಸಮೀಕ್ಷೆಗಳ ಅನ್ವಯ ದೇಶದ ಶೇ.14ರಷ್ಟು ಜನರಿಗೆ ಕೊರೊನಾ ಸೋಂಕು ಬಂದಿದೆ.

ಆದರೆ, ಈ ಸೆರೋ ಸಮೀಕ್ಷೆಗಳು ನಿಖರ ಅಂದಾಜು ನೀಡುತ್ತಿಲ್ಲ ಎಂದಿರುವ ಅಗರ್‌ವಾಲ್, ದೇಶದಲ್ಲಿ ದೊಡ್ಡ ಪ್ರಮಾಣದ ಜನಸಮೂಹ ಇರುವುದರಿಂದ ನಿಖರ ವರದಿ ಇದರಿಂದ ಸಾಧ್ಯವಾಗದು ಎಂದು ಅಗರ್‌ವಾಲ್ ಹೇಳಿದ್ದಾರೆ.

ಇದರ ಬದಲು ವೈರಾಲಜಿಸ್ಟ್, ವಿಜ್ಞಾನಿಗಳು ಹಾಗೂ ಇತರೆ ಪರಿಣಿತರು ಗಣಿತದ ಮಾದರಿಯನ್ನು ಅವಲಂಬಿಸಿದ್ದಾರೆ. ಈ ಮಾದರಿಯ ಅನ್ವಯ ದೇಶದ ಶೇ.30ರಷ್ಟು ಜನರಿಗೆ ಕೊರೊನಾ ಬಂದಿದೆ ಎಂದವರು ತಿಳಿಸಿದ್ದಾರೆ.

ದೇಶದ ಜನಸಂಖ್ಯೆ 130 ಕೋಟಿ ಎಂದು ಪರಿಗಣಿಸಿದಾಗ ಒಟ್ಟು ಸೋಂಕಿತರ ಸಂಖ್ಯೆ 39 ಕೋಟಿಯಷ್ಟಾಗುತ್ತದೆ.

**ಮುಂದಿನ ಫೆಬ್ರವರಿಯಲ್ಲಿ ದೇಶದ ಅರ್ಧ ಜನರಿಗೆ ಸೋಂಕು ಬರಲಿದೆ ಎಂದು ಕೇಂದ್ರ ಕೊರೊನಾ ಸಮಿತಿ ಸದಸ್ಯನ ಅಂದಾಜು**



ವರದಿಯಾಗದೇ ಇರುವ ಸೋಂಕುಗಳನ್ನೂ ನಾವು ಪರಿಗಣಿಸಿದ್ದೇವೆ. ಹೀಗಾಗಿ ವರದಿಯಾದ ಪ್ರಕರಣಗಳು ಹಾಗೂ ವರದಿಯಾಗದೇ ಇರುವ ಪ್ರಕರಣಗಳೆಂದು ಎರಡು ಭಾಗವಾಗಿ ವಿಭಜಿಸಿದ್ದೇವೆ ಎಂದು ಅಗರ್‌ವಾಲ್ ತಿಳಿಸಿದ್ದಾರೆ.

ಮುಂದಿನ ವರ್ಷ ಫೆಬ್ರವರಿ ವೇಳೆಗೆ ದೇಶದ ಅರ್ಧದಷ್ಟು ಜನರಿಗೆ ಕೊರೊನಾ ಸೋಂಕು ಬರಲಿದೆ. ಇದರಿಂದಾಗಿ ಸೋಂಕು ಹರಡುವ ವೇಗ ಕಡಿಮೆಯಾಗಲಿದೆ ಎಂದೂ ಅವರು ಹೇಳಿದ್ದಾರೆ.

## ಕೊರೊನಾ ಪರಿಸ್ಥಿತಿ ಪರಿಗಣಿಸಿ ಹಜ್ ನಿರ್ಧಾರ

ನವದೆಹಲಿ, ಅ. 19 - 2021ರಲ್ಲಿ ಹಜ್ ಯಾತ್ರೆಯ ಬಗ್ಗೆ ಸೌದಿ ಅರೇಬಿಯಾ ಅಂತಿಮ ನಿರ್ಧಾರ ತೆಗೆದುಕೊಂಡ ನಂತರ ಭಾರತ ನಿರ್ಣಯ ತೆಗೆದುಕೊಳ್ಳಲಿದೆ. ಯಾತ್ರೆಯ ಸಂದರ್ಭದಲ್ಲಿ ದೇಶ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕೊರೊನಾ ಪರಿಸ್ಥಿತಿಯನ್ನೂ ಪರಿಗಣಿಸಲಾಗುವುದು ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಮುಕ್ತಾರ್ ಅಬ್ಬಾಸ್ ನಕ್ವಿ ಹೇಳಿದ್ದಾರೆ.

ಹಜ್ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ನಕ್ವಿ, 2021ರ ಜೂನ್ - ಜುಲೈನಲ್ಲಿ ಹಜ್ ಯಾತ್ರೆ ನಡೆಸಲು ಉದ್ದೇಶಿಸಲಾಗಿದೆ. ಸೌದಿ ಅರೇಬಿಯಾ ಸರ್ಕಾರ ನಿರ್ಧಾರ ತೆಗೆದುಕೊಂಡ ನಂತರ ಭಾರತದಲ್ಲೂ ಹಜ್ ಯಾತ್ರೆಗೆ ಅರ್ಜಿ ಪಡೆಯಲಾಗುವುದು ಎಂದು ತಿಳಿಸಿದ್ದಾರೆ.

ಸೌದಿ ಅರೇಬಿಯಾ ಪ್ರಕಟಿಸುವ ಮಾರ್ಗಸೂಚಿಗಳು ಹಾಗೂ ಭಾರತದಲ್ಲಿರುವ ಕೊರೊನಾ ಪರಿಸ್ಥಿತಿಯನ್ನು ಪರಿಗಣಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಮಾರ್ಗಸೂಚಿಗಳ ಹಿನ್ನೆಲೆಯಲ್ಲಿ ಇಡೀ ಹಜ್ ಪ್ರಕ್ರಿಯೆ ಬದಲಾಗಬಹುದು. ವಸತಿ, ಪ್ರಯಾಣ, ಆರೋಗ್ಯ ಹಾಗೂ ಇತರೆ ಸೌಲಭ್ಯಗಳಲ್ಲಿ ಬದಲಾವಣೆಯಾಗಲಿದೆ ಎಂದು ತಿಳಿಸಿದ್ದಾರೆ.

## ದಾಖಲೆ ಇಳುವರಿ ನಿರೀಕ್ಷೆ ಹುಸಿ

**ಮಳೆಯಿಂದಾಗಿ ಉತ್ತರ, ಮಧ್ಯ ಕರ್ನಾಟಕದಲ್ಲಿ ಭಾರೀ ಪ್ರಮಾಣ ಬೆಳೆ ನಾಶ**

ಬೆಂಗಳೂರು, ಅ. 19 - ಕೊರೊನಾ ಭೀತಿಯಲ್ಲೂ ಆಹಾರ ಉತ್ಪಾದನೆಯಲ್ಲಿ ದಾಖಲೆಯಾಗಬಹುದು ಎಂಬ ನಿರೀಕ್ಷೆ ಹುಸಿಯಾಗುತ್ತಿದೆ.

ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆ ಮತ್ತು ನೆರೆಯಿಂದ ಲಕ್ಷಾಂತರ ಹೆಕ್ಟೇರ್ ಭೂಮಿಯಲ್ಲಿ ಬೆಳೆದ ಬೆಳೆಗಳು ಕೊಚ್ಚಿ ಹೋಗಿವೆ, ಇಲ್ಲವೇ ನಾಶವಾಗಿವೆ.

ಸೋಂಕಿನ ನಡುವೆಯೂ ಆಹಾರ ಉತ್ಪಾದನೆ ಬಂಪರ್ ಆಗಲಿದೆ ಎಂಬ ನಿರೀಕ್ಷೆ ಇತ್ತು. ಆದರೆ, ಉತ್ತರ ಕರ್ನಾಟಕ ಭಾಗ ಮತ್ತು ಮಧ್ಯ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಬೀಳುತ್ತಿರುವ ಮಳೆ ಮತ್ತು ನೆರೆಯಿಂದ ಭತ್ತ, ಜೋಳ, ದ್ವಿದಳ ಧಾನ್ಯಗಳು ಹಾಗೂ ಹತ್ತಿ ಭಾರೀ ಪ್ರಮಾಣದಲ್ಲಿ ನಾಶವಾಗಿದೆ.

ಮುಂಗಾರು ಮಳೆ ಪ್ರಾರಂಭದಲ್ಲೇ ಕೆಲವು ಜಿಲ್ಲೆಗಳಲ್ಲಿ ಬಿದ್ದ ಭಾರೀ ಮಳೆ ಬೆಳೆ ನಾಶ ಮಾಡಿತ್ತು. ಇದೀಗ ರಾಜ್ಯದಲ್ಲಿ ಬೀಳುತ್ತಿರುವ ಮತ್ತೊಂದು ಮಳೆಯಿಂದ ಕೃಷಿಯ ಮೇಲೆ ದೊಡ್ಡ ಹೊಡೆತ ಕೊಟ್ಟಿದೆ.

ಎಷ್ಟು ನಷ್ಟವುಂಟಾಗಿದೆ ಎಂಬುದರ ಬಗ್ಗೆ ಪೂರ್ವ ಸಮೀಕ್ಷೆ ಮಾಡಲು ಜಿಲ್ಲಾಧಿಕಾರಿಗಳಿಂದ ಆಗುತ್ತಿಲ್ಲ. ಆದರೆ, 15 ಸಾವಿರಕ್ಕೂ ಹೆಚ್ಚು ಮನೆಗಳು ನಾಶವಾಗಿ 8 ಸಾವಿರಕ್ಕೂ ಹೆಚ್ಚು ಜನರು ಸರ್ಕಾರಿ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ.

ಸರ್ಕಾರದ ನಡವಳಿಕೆ ವಿರುದ್ಧ (2ನೇ ಪುಟಕ್ಕೆ)

## 2ನೇ ಬಾರಿ ಕೊರೊನಾ 60 ಸಾವಿರಕ್ಕಿಂತ ಕಡಿಮೆ

ನವದೆಹಲಿ, ಅ. 19 - ಈ ತಿಂಗಳಲ್ಲಿ ಎರಡನೇ ಬಾರಿ ದೈನಂದಿನ ಕೊರೊನಾ ಪ್ರಕರಣಗಳ ಸಂಖ್ಯೆ 60 ಸಾವಿರಕ್ಕೂ ಕಡಿಮೆ ಇದೆ. ದೈನಂದಿನ ಸಾವಿನ ಸಂಖ್ಯೆ 600ಕ್ಕೂ ಕಡಿಮೆ ಇದೆ. ಇದು ಮೂರು ತಿಂಗಳಲ್ಲೇ ಅತಿ ಕಡಿಮೆಯಾಗಿದೆ.

ಸೋಮವಾರದಂದು 55,722 ಸೋಂಕಿತರು ಪತ್ತೆಯಾಗಿದ್ದಾರೆ. ದೇಶದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 75.50 ಲಕ್ಷಕ್ಕೆ ತಲುಪಿದೆ. ಈ ಹಿಂದೆ ಅಕ್ಟೋಬರ್ 13ರಂದು ದೈನಂದಿನ ಸೋಂಕಿತರ ಸಂಖ್ಯೆ 60 ಸಾವಿರಕ್ಕೂ ಕಡಿಮೆ ಇತ್ತು. ಕಳೆದ 24 ಗಂಟೆಗಳಲ್ಲಿ 579 ಸಾವುಗಳು ಸಂಭವಿಸಿದ್ದು, ಒಟ್ಟು ಸಾವುಗಳ ಸಂಖ್ಯೆ 1.14 ಲಕ್ಷಕ್ಕೆ ತಲುಪಿದೆ.

ದೇಶದಲ್ಲಿ ಸತತ ಮೂರನೇ ದಿನ ಸಕ್ರಿಯ ಸೋಂಕಿತರ ಸಂಖ್ಯೆ 8 ಲಕ್ಷಕ್ಕೂ ಕಡಿಮೆ ಇದೆ. ಈಗ 7.72 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ. ಇದು ಒಟ್ಟು ಸೋಂಕಿತರ ಶೇ.10.23ರಷ್ಟಾಗಿದೆ.

## ಪಂಚಮಸಾಲಿ ಸಮುದಾಯಕ್ಕೆ '2ಎ' ಮೀಸಲಾತಿ ಕಲ್ಪಿಸಿ



ಹರಿಹರ, ಅ.19- ನಗರದ ಪಂಚಮಸಾಲಿ ಗುರುಪೀಠಕ್ಕೆ ಗೃಹಮಂತ್ರಿ ಬಸವರಾಜ ಬೊಮ್ಮಾಯಿ ಇಂದು ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾ ಸ್ವಾಮೀಜಿ ಪಂಚಮಸಾಲಿ ಸಮುದಾಯಕ್ಕೆ ರಾಜ್ಯದಲ್ಲಿ 2ಎ ವರ್ಗದಡಿ ಮೀಸಲಾತಿ ಕಲ್ಪಿಸಿಕೊಡಬೇಕು ಮತ್ತು ಕೇಂದ್ರ ಸರ್ಕಾರವು ಸಮುದಾಯವನ್ನು ಒಬಿಸಿ ಕೆಟಗರಿಯಲ್ಲಿ ಸೇರಿಸಬೇಕು. ಈ ಪ್ರಸ್ತಾಪವನ್ನು ರಾಜ್ಯ ಸರ್ಕಾರವು ಸಚಿವ ಸಂಪುಟದ ಮುಂದಿಟ್ಟು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಕುರಿತು ಚರ್ಚಿಸಬೇಕು ಎಂದು ಲಿಖಿತ ಮನವಿ ಸಲ್ಲಿಸಿ ಕೇಳಿಕೊಂಡರು.

ಮನವಿ ಸ್ವೀಕರಿಸಿದ ಬೊಮ್ಮಾಯಿ, ಸಮುದಾಯದ ಶ್ರೇಯೋಭಿವೃದ್ಧಿಗೆ ಸ್ಪಂದಿಸುವ ಭರವಸೆ ನೀಡಿದರು. ಸಮುದಾಯವನ್ನು 2ಎ ಮೀಸಲಾತಿ ವರ್ಗದಡಿ ಸೇರಿಸುವಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಪ್ರಸ್ತಾವನೆ ಸಲ್ಲಿಸಿರುವ ಶ್ರೀ ವಚನಾನಂದ ಸ್ವಾಮೀಜಿಗೆ ಬೆಂಬಲವಾಗಿ ನಿಲ್ಲುವ ಆಶಯ (2ನೇ ಪುಟಕ್ಕೆ)

## ತಿದ್ದುಪಡಿ ಕಾಯ್ದೆ ತಿಳಿಯದೇ ಪೂರ್ವಾಗ್ರಹ ಪೀಡಿತರಾಗಿ ವಿರೋಧಿಸುವುದು ಸಲ್ಲ

ದಾವಣಗೆರೆ, ಅ.19- ಸರ್ಕಾರವೇ ಘೋಷಿಸಿದ ಬೆಂಬಲ ಬೆಲೆಗಿಂತಲೂ ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ರೈತರ ಉತ್ಪನ್ನಗಳು ಖರೀದಿಯಾಗದಂತಹ ವ್ಯವಸ್ಥೆ ಅನುಷ್ಠಾನಕ್ಕೆ ಸರ್ಕಾರ ಗಮನಹರಿಸಬೇಕು ಎಂದು ಅಖಂಡ ಕರ್ನಾಟಕ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷರೂ ಆದ ಮಾಜಿ ಸಚಿವ ಬಾಬುಗೌಡ ಪಾಟೀಲ್ ಒತ್ತಾಯಿಸಿದರು.

ಅಖಂಡ ಕರ್ನಾಟಕ ರೈತ ಸಂಘದ ವತಿಯಿಂದ ನಗರದ ರೋಟರಿ ಬಾಲ ಭವನದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಸಂಘಟನೆಯ ರಾಜ್ಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೈತರ ಬೆಳೆಗಳನ್ನು ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಮಾರುಕಟ್ಟೆಯಲ್ಲಿ ಖರೀದಿಸದಂತೆ ವ್ಯವಸ್ಥೆಯಾಗಬೇಕು. ಅಲ್ಲದೇ ಮಾರುಕಟ್ಟೆಯಲ್ಲಿ ದರ ಹೆಚ್ಚಾಗುವವರೆಗೂ ಉತ್ಪನ್ನ ಖರೀದಿಸುವ ವ್ಯವಸ್ಥೆಯಾಗಬೇಕು. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಹಣಕಾಸು ನೆರವು ಒದಗಿಸಬೇಕು. ಸರ್ಕಾರವು ರೈತರ ಬೆಳೆ ಕಟಾವಿಗೆ ಬರುವ 15 ದಿನ ಮೊದಲೇ ಖರೀದಿ ಕೇಂದ್ರ ತೆರೆಯಬೇಕು. ಈ ಎಲ್ಲಾ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿ, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಬೇಕೆಂದರು.



**ಅತಿವೃಷ್ಟಿ, ಪ್ರವಾಹದಂತಹ ಸಂದರ್ಭದಲ್ಲಿ ಪ್ರತಿ ಎಕರೆಗೆ 10 ಸಾವಿರ ಮತ್ತು ಈರುಳ್ಳಿ, ಆಲೂಗಡ್ಡೆ, ಮೆಣಸಿನಕಾಯಿ ಅಂತಹ ಪ್ರಮುಖ ತರಕಾರಿ ಬೆಳೆಗಳಿಗೆ 20 ಸಾವಿರ ಒಟ್ಟಾರೆ 30 ಸಾವಿರ ಪರಿಹಾರ ಧನವನ್ನು ಸರ್ಕಾರ ಕೊಡಬೇಕು. ಮದ್ಯ ಮಾರಾಟದಿಂದ ಸರ್ಕಾರಕ್ಕೆ 23 ಸಾವಿರ ಕೋಟಿ ರೂ. ಆದಾಯ ಬರುತ್ತದೆ. ಅದರಲ್ಲಿ ರೈತರ ಹಿತಕ್ಕಾಗಿ ಸುಮಾರು 10 ಸಾವಿರ ಕೋಟಿ ಪರಿಹಾರ ಧನಕ್ಕೆ ಮೀಸಲಿಟ್ಟರೆ ಸರ್ಕಾರಕ್ಕೆ ಹೊರೆಯಾಗುವುದಿಲ್ಲ.**

**- ಬಾಬುಗೌಡ ಪಾಟೀಲ್, ಮಾಜಿ ಸಚಿವರು**

ಗುಣಮಟ್ಟ ಪ್ರಶ್ನಿಸಿ ಕೆಲ ಬಾರಿ ಬಹುರಾಷ್ಟ್ರೀಯ ಕಂಪನಿಗಳು ರೈತರ ಉತ್ಪನ್ನಗಳನ್ನು ಖರೀದಿಸುವುದಿಲ್ಲ. ಇದರಿಂದ ರೈತರು ನಷ್ಟ ಅನುಭವಿಸಬೇಕಾ ಗುತ್ತದೆ. ಆದ್ದರಿಂದ ಬೆಂಬಲ ಬೆಲೆಯಡಿ ರೈತರ ಎಲ್ಲಾ ಉತ್ಪನ್ನಗಳು ಖರೀದಿಯಾಗಬೇಕು. ಬಹುರಾಷ್ಟ್ರೀಯ ಕಂಪನಿಗಳು ಒಪ್ಪಂದ ಮಾಡಿಕೊಂಡಂತೆ ರೈತರ ಉತ್ಪನ್ನಗಳನ್ನು ಗುಣಮಟ್ಟದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಖರೀದಿಸಬೇಕು. ಈ ಬಗ್ಗೆ ಸರ್ಕಾರಗಳು ಕಂಪನಿಗಳಿಗೆ ಸ್ಪಷ್ಟ ನಿರ್ದೇಶನ ನೀಡಬೇಕು. ಅಲ್ಲದೇ ಪ್ರತಿ ಜಿಲ್ಲೆಯಲ್ಲೂ ನ್ಯಾಯಾಲಯ ಸ್ಥಾಪಿಸುವಂತೆ ಆಗ್ರಹಿಸಿದರು.


ಎಪಿಎಂಸಿ, ವಿದ್ಯುತ್ (2ನೇ ಪುಟಕ್ಕೆ)

## ಬೆಂಬಲ ಬೆಲೆಯಡಿ ಖರೀದಿ ವಿಳಂಬವಾದರೆ ದಾವೆ ಎಚ್ಚರಿಕೆ

ದಾವಣಗೆರೆ, ಅ.19- ಕೇಂದ್ರ ಸರ್ಕಾರವೇ ಘೋಷಿಸಿರುವಂತೆ 2020-21ರ ಕೃಷಿ ಉತ್ಪನ್ನ ಬೆಂಬಲ ಬೆಲೆಯಡಿ ಮೆಕ್ಕೆಜೋಳ, ಭತ್ತ ಸೇರಿದಂತೆ ರೈತರ ಇನ್ನಿತರೆ ಬೆಳೆಗಳನ್ನು ಮಾರುಕಟ್ಟೆಗಳಲ್ಲಿ ಖರೀದಿಸುವಂತೆ ಶೀಘ್ರವೇ ಅನುಷ್ಠಾನಗೊಳ್ಳಬೇಕು. ಇಲ್ಲದಿದ್ದರೆ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡುವುದಾಗಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದೆ.

ಕೃಷಿ ಉತ್ಪನ್ನ ಬೆಂಬಲ ಬೆಲೆಯಡಿ ರೈತರ ಬೆಳೆಗಳನ್ನು ಖರೀದಿಸುವಂತೆ ಆಗ್ರಹಿಸಿ ಮಾಯಕೊಂಡದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯಿಂದ ನಿರಂತರ ಧರಣಿ ಸತ್ಯಾಗ್ರಹ ಕೈಗೊಂಡಿದ್ದ ವೇಳೆ ಧರಣಿ ಸ್ಥಳಕ್ಕಾಗಮಿಸಿದ್ದ ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ ಸಭೆ ನಡೆಸುವುದಾಗಿ ತಿಳಿಸಿದ್ದರು. ಅಂತೆಯೇ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಇಂದು ರೈತ ಸಂಘಟನೆ ಮುಖಂಡರೊಡನೆ ಸಭೆ ನಡೆಸಿದರು.

2020-21ರ ಕೃಷಿ ಉತ್ಪನ್ನ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ನಿಗದಿಪಡಿಸಿ, ಆದೇಶ ಹೊರಡಿಸಿದ್ದರೂ ಸಹ ಜಿಲ್ಲೆಯಲ್ಲಿ ಇನ್ನೂ ಅನುಷ್ಠಾನಗೊಂಡಿಲ್ಲ. ಪ್ರಧಾನ ಮಂತ್ರಿ ಅವರು ಕೃಷಿ ಉತ್ಪನ್ನ ಬೆಂಬಲ ಬೆಲೆ ನಿಗದಿ ಮಾಡಿರುವುದು ಕಾನೂನಾತ್ಮಕವಾಗಿ ಜಾರಿಯಾಗಿದೆಯೇ?. ಅನುಷ್ಠಾನವಾಗಿದ್ದರೆ ಅದನ್ನು ದೃಢೀಕರಿಸಬೇಕು. ಪ್ರಧಾನ ಮಂತ್ರಿ ಅವರು ಅನುಷ್ಠಾನ ಮಾಡಿರುವುದು ಸತ್ಯವೋ ಅಥವಾ ಸುಳ್ಳೋ ಬಹಿರಂಗಪಡಿಸುವಂತೆ ಸಭೆಯಲ್ಲಿ ರೈತ ಸಂಘಟನೆ (2ನೇ ಪುಟಕ್ಕೆ)



## ಕೋರ್ಟ್ ಆನ್‌ಲೈನ್ ವಿಚಾರಣೆಗೆ 1,500 ಅನುಮತಿ

ನವದೆಹಲಿ, ಅ. 19 - ಕೊರೊನಾ ಹಿನ್ನೆಲೆಯಲ್ಲಿ ನ್ಯಾಯಾಲಯಗಳು ಆನ್‌ಲೈನ್ ಮೂಲಕವೇ ವಿಚಾರಣೆ ನಡೆಸುವುದನ್ನು ಮುಂದುವರೆಸಲಿರುವುದರಿಂದ, 1,500 ವಿಡಿಯೋ ಕಾನ್ಫರೆನ್ಸ್ ಅನುಮತಿಗಳನ್ನು ಪಡೆಯಲು ಕೇಂದ್ರ ಸರ್ಕಾರ ಮುಂದಾಗಿದೆ. ಹೈಕೋರ್ಟ್ ಹಾಗೂ ಜಿಲ್ಲಾ ನ್ಯಾಯಾಲಯಗಳಲ್ಲಿ ಈ ವ್ಯವಸ್ಥೆ ಕಲ್ಪಿಸಲು ಒಂಭತ್ತು ಕೋಟಿ ರೂ. ವೆಚ್ಚವಾಗಲಿದೆ ಎಂದು ಹಿರಿಯ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ. ರಾಷ್ಟ್ರವ್ಯಾಪಿ ಲಾಕ್‌ಡೌನ್ (3ನೇ ಪುಟಕ್ಕೆ)

## ನವೆಂಬರ್‌ನಿಂದ ಪದವಿ ತರಗತಿ ಆರಂಭ ತಯಾರಿ

ಬೆಂಗಳೂರು, ಅ. 19 - ನವೆಂಬರ್‌ನಿಂದ ನೇರ ಪದವಿ ತರಗತಿಗಳನ್ನು ಆರಂಭಿಸಲು ಸರ್ಕಾರ ತಯಾರಿ ಮಾಡಿಕೊಳ್ಳುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಸಂಬಂಧಪಟ್ಟವರ ಜತೆ ಚರ್ಚಿಸಿ ಅಂತಿಮ ತೀರ್ಮಾನ ಮಾಡಲಾಗುವುದು ಎಂದರು.

ಕೊರೊನಾ ಸಂಕಷ್ಟ ಕಾಲದಲ್ಲಿ ಶಾಲಾ - ಕಾಲೇಜುಗಳನ್ನು (2ನೇ ಪುಟಕ್ಕೆ)

## ಹಬ್ಬಗಳಲ್ಲಿ ಗುಂಪು ಸೇರಲು ಅವಕಾಶವಿಲ್ಲ: ಡಿಸಿ



ದಾವಣಗೆರೆ ಅ.19- ಧಾರ್ಮಿಕ ಆಚರಣೆಗಳಾದ ಹಬ್ಬಗಳನ್ನು ಮನೆಗಳಲ್ಲಿಯೇ ಶ್ರದ್ಧಾ - ಭಕ್ತಿಯಿಂದ ಆಚರಿ ಸೋಣ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಕರೆ ನೀಡಿದರು.

ಜಿಲ್ಲಾ ಪೊಲೀಸ್ ಇಲಾಖೆಯಿಂದ ಇಲ್ಲಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಇಂದು ಏರ್ಪಡಿಸಲಾಗಿದ್ದ ದಸರಾ, ದೀಪಾವಳಿ ಮತ್ತು ಈದ್ ಮಿಲಾದ್ ಆಚರಣೆ ಕುರಿತ ನಾಗರಿಕ ಶಾಂತಿ ಸೌಹಾರ್ದ ಸಭೆಯಲ್ಲಿ ಅವರು ಮಾತನಾಡಿದರು.

ಕೋವಿಡ್ ಮಾರ್ಗಸೂಚಿಗಳನ್ವಯ ಹಬ್ಬಗಳನ್ನು ಆಚರಿಸಬೇಕಿರುವುದರಿಂದ ಯಾವುದೇ ಕಾರಣಕ್ಕೂ ಸಾಮೂಹಿಕ ಪ್ರಾರ್ಥನೆ, ಮೆರವಣಿಗೆ, ಗುಂಪು ಸೇರಲು ಅವಕಾಶವಿಲ್ಲ ಎಂದು ಹೇಳಿದರು.

ಕೋವಿಡ್ ಮಾರ್ಗಸೂಚಿಯನ್ವಯ ಹಗಲು, ರಾತ್ರಿ ಪ್ರವಚನ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮ, ಸಭೆ, ಸಮಾರಂಭ ಮಾಡದಂತೆ ನಿಷೇಧಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಇದಕ್ಕೆ ಅವಕಾಶ ನೀಡಿದರೆ ನಮ್ಮ ಮೇಲೆ ಕ್ರಮ ಜರುಗಿಸಲಾಗುತ್ತದೆ. ಆದ್ದರಿಂದ ಜಿಲ್ಲಾಡಳಿತಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಅವರು ವಿವಿಧ (3ನೇ ಪುಟಕ್ಕೆ)

### ಸೋಂಕಿತರ ಸಂಖ್ಯೆ ಇಳಿಕೆ: ವಾಸ್ತವ ಸ್ಥಿತಿಯೇ ಬೇರೆ

ಕಳೆದ ಎರಡು ದಿನಗಳಿಂದ ಜಿಲ್ಲೆಯಲ್ಲಿ ಕಡಿಮೆ ಸಂಖ್ಯೆಯಲ್ಲಿ ಕೊರೊನಾ ಸೋಂಕಿತರ ಪ್ರಕರಣಗಳು ಬರುತ್ತಿವೆ. ಇದು ಇನ್ನು ಮುಂದೆ ಸೋಂಕು ಕಡಿಮೆ ಆಗಲಿದೆ ಎಂದು ಹಲವರು ತಿಳಿದು ಕೊಂಡಿದ್ದಾರೆ. ಆದರೆ, ವಾಸ್ತವ ಸ್ಥಿತಿಯೇ ಬೇರೆ. ನಿತ್ಯ 3 ಸಾವಿರ ಪರೀಕ್ಷೆ ಮಾಡಲಾಗುತ್ತಿತ್ತು. ಆದರೆ, ನಿನ್ನೆ 900 ಮಾತ್ರ ಮಾಡಿದ್ದಾರೆ. ಹಾಗಾಗಿ ಕಡಿಮೆ ಪ್ರಕರಣಗಳು ವರದಿಯಾಗಿವೆಯೇ ಹೊರತು ಸೋಂಕು ಕಡಿಮೆಯಾಗಿಲ್ಲ ಎಂದು ಜಿಲ್ಲಾಧಿಕಾರಿ ಹೇಳಿದರು.

ಕಡಿಮೆ ಪ್ರಕರಣಗಳು ದೃಢಪಟ್ಟಾಕ್ಷಣ ಕೊರೊನಾ ಕಡಿಮೆಯಾಗುತ್ತಿದೆ ಎಂದು ಮೈ ಮರೆಯದೇ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕಿದೆ. ಪರೀಕ್ಷೆಗಾಗಿ (3ನೇ ಪುಟಕ್ಕೆ)

### ಸಂಘ-ಸಂಸ್ಥೆಗಳಲ್ಲಿ ಟೆಸ್ಟ್ ಕಡ್ಡಾಯವಾಗಲಿ: ಡಿಸಿ

ಕೊರೊನಾ ಆರ್‌ಟಿಪಿಸಿಆರ್ ಟೆಸ್ಟ್ ಮಾಡಿಸಿಕೊಂಡು ನೆಗೆಟಿವ್ ಸರ್ಟಿಫಿಕೇಟ್ ಹೊಂದಿದವರಿಗೆ ಮಾತ್ರ ಸಂಘ-ಸಂಸ್ಥೆಗಳಲ್ಲಿ, ದೇವಸ್ಥಾನಗಳಲ್ಲಿ ಒಳಗೆ ಪ್ರವೇಶ ಎನ್ನುವುದನ್ನು ಸರ್ಕಾರ ಕಡ್ಡಾಯ ಮಾಡಿದರೆ ಅಥವಾ ಪರೀಕ್ಷೆ ನಂತರ ಈ ತರಹದ ಸೌಲಭ್ಯ ನೀಡುತ್ತೇವೆ, ಇಲ್ಲದಿದ್ದರೆ ಇಲ್ಲ ಎನ್ನುವ ನಿಯಮ ಮಾಡಿದರೆ ಸ್ವಾಭಾವಿಕವಾಗಿ ಎಲ್ಲರೂ ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ. ಆದರೆ ಈ ರೀತಿ ಸರ್ಕಾರಿ ಆದೇಶ ಹೊರಡಿಸಲು ಸಾಧ್ಯವಾಗದೇ ಇದ್ದರೂ, ಎಲ್ಲಾ ಸಂಘ-ಸಂಸ್ಥೆಗಳಲ್ಲಿ ಈ ಪ್ರಯೋಗ ಮಾಡಿದಲ್ಲಿ ಜಿಲ್ಲಾಡಳಿತಕ್ಕೆ ಸಹಕಾರಿಯಾಗುತ್ತದೆ ಎಂದು ಜಿಲ್ಲಾಧಿಕಾರಿ ಹೇಳಿದರು.

**ಸೈಟು ಮಾರಾಟಕ್ಕೆ (KHB)**
ದಾವಣಗೆರೆಯಿಂದ ಮೊದಲನೇ ಭಾಗದ ರೆಸಾರ್ಟ್ ಎದುರು
50x80 ಉತ್ತರ.
ಕಿರಣ್ ಬೂಸ್ನೂರ್ (ಏಜೆಂಟ್)
97315-63409
(ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟು ಬೇಕೇ ? ಅಥವಾ ಮಾರಾಟಕ್ಕೆ ಇದೆಯೇ ? ವಿಚಾರಿಸಿ)

**ರೂಂ ಬಾಡಿಗೆಗೆ ಇದೆ**
ಈರುಳ್ಳಿ ಮಾರ್ಕೆಟ್, ಎ.ಪಿ.ಎಂ.ಸಿ. ಯಾರ್ಡ್, ಐ.ಬಿ. ರೋಡ್, 1ನೇ ಮಹಡಿಯಲ್ಲಿ 3 ರೂಂಗಳು (15x15) ಬಾಡಿಗೆಗೆ ಇವೆ.
ಸಂಪರ್ಕಿಸಿ:
94484 93139
74066 84250

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಬಂಗ್ಲೆ ಸೈಟು, ಜಮೀನು ಮಾರಾಟಕ್ಕೆ**
ಪೂಜಾ ಹೋಟೆಲ್ ನಿಂದ ಬಾತಿ ಕೆರೆ ಮಧ್ಯೆ ಪಿ.ಬಿ. ರೋಡ್ ಗೆ 20,000, 30,000, 55,000, 80,000 ಅಡಿ, 1 ಎಕರೆ, 2 ಎಕರೆ, 3 ಎಕರೆ. ರೆವಿನ್ಯೂ, ಅಲಿನೇಷನ್, ಸಿಂಗಲ್ ಅಪ್ರೂವಲ್ ಜಾಗ ಮಾರಾಟಕ್ಕೆ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಬಂಗಲೆ ಸೈಟ್ ಮಾರಾಟಕ್ಕಿದೆ**
ದಾವಣಗೆರೆಯ ಬೈಪಾಸ್ ಮತ್ತು ಗಾಜಿನ ಮನೆ ಹತ್ತಿರ 40x71, ಡೋ.ನಂ. 1717/5, ರಸ್ತೆ, ನೀರು, ಕರೆಂಟು, ಡ್ರೈನೇಜ್ ಎಲ್ಲಾ ಪರ್ಮಿಷನ್ ಪಡೆದಿರುವ ಪೂರ್ವಕ್ಕಿರುವ ಸೈಟು ಮಾರಾಟಕ್ಕಿದೆ ವಿಚಾರಿಸಿ
ಎಸ್.ಜಿ. ಕೃಷ್ಣಮೂರ್ತಿ
86182 19879, 85539 20876

**ಮಾರಾಟಕ್ಕೆ**
ಸಿದ್ದವೀರಪ್ಪ ಬಡಾವಣೆ ಮನೆ-27×44, ವಿನೋಬನಗರ ಮನೆ-15×40, 15×44, ನಿಜಲಿಂಗಪ್ಪ ಲೇಔಟ್ ಮನೆಗಳು-30×35, 22×44, DCM ಮನೆ-30×40, SS ಲೇಔಟ್ ಮನೆ-30×40(35 ಸಾವಿರ ಬಾಡಿಗೆ ಬರುವಂತಹ ಮನೆ) ರಾಜೇಂದ್ರ ಬಡಾವಣೆ ಮನೆ- 20×30 ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40
78996 36597, 99165 25828

**ಸೈಟುಗಳು ಮಾರಾಟಕ್ಕಿವೆ**
ಹರಪನಹಳ್ಳಿ ತಾಲ್ಲೂಕಿನ ಮತ್ತಿಹಳ್ಳಿ ಗ್ರಾಮದ ರಿ.ಸ.ನಂ 143/ಎ2 ರಲ್ಲಿ 1 ಎಕರೆ 80 ಸೆಂಟ್ಸ್ ವಿಸ್ತೀರ್ಣದಲ್ಲಿ ನಿರ್ಮಿಸಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನೆಗೊಂಡ ಗ್ರಾಮದ ಮಧ್ಯದಲ್ಲಿ ಇರುವ ವಿವಿಧ ಅಳತೆಯ ಒಟ್ಟು 23 ಸೈಟುಗಳು ಸಗಟಾಗಿ ಮಾರಾಟಕ್ಕಿವೆ. ಕೊಳ್ಳುವ ಆಸಕ್ತರು ಸಂಪರ್ಕಿಸಿ:
73537 70019

**ಖಾಲಿ ಜಾಗ ಬಾಡಿಗೆಗೆ ಇದೆ**
ಸೈಟ್ ನಂ. 241/4-6,7 ಮತ್ತು 8 ಚಾನಲ್ ಹತ್ತಿರ ಶಾಮನೂರು
ಅಳತೆ - 90x45 =4050 Sqft
ಸಂಪರ್ಕಿಸಿ:
96323 29146
98807 28091

**ಬೇಕಾಗಿದ್ದಾರೆ**
ತಿಂಗಳ ಸಂಬಳ 5000ರ ಮೇರೆಗೆ ಕಾರ್ ಡ್ರೈವರ್ ಬೇಕಾಗಿದ್ದಾರೆ. (Out Side All Over Karnataka (Monthly 18 days Duty, 12 days Holiday) ಯಾವುದೇ ತರಹದ ಬ್ಯಾಟಾ ಇರುವುದಿಲ್ಲ ಮತ್ತು ಊಟ, ತಿಂಡಿ ಪ್ರತ್ಯೇಕ ಕೊಡಲಾಗುವುದು. ವಯಸ್ಸು 25 ರಿಂದ 50 ರೊಳಗೆ.
98442 33557

**ಮನೆ ಬಾಡಿಗೆಗೆ ಇದೆ**
'ಸುಮ್ಮನೆ' ಸಿಂಗಲ್ ಬೆಡ್ ರೂಂ, #1928/63A, 1ನೇ ಮಹಡಿ, ಎಸ್.ಎಸ್. ಲೇಔಟ್, ಎ ಬ್ಲಾಕ್, ಎಂ.ಬಿ.ಎ. ಕಾಲೇಜ್ ಹತ್ತಿರ, ಫಾರ್ಮಸಿ ಕಾಲೇಜ್ ಪಕ್ಕ, ದಾವಣಗೆರೆ.
ಫೋ. : 70227 94155

**ಮಾರಾಟಕ್ಕಿದೆ**
ಡಿ.ಸಿ.ಎಂ. ಕ್ವಾರ್ಟರ್ಸ್, ಪಿ.ಬಿ. ರಸ್ತೆಯಲ್ಲಿರುವ ಔಷಧಿ ಅಂಗಡಿಯು ಯಥಾಸ್ಥಿತಿಯಲ್ಲಿ ಮಾರಾಟಕ್ಕಿದೆ.
99020 72040
72045 20365

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ನಮ್ಮ ಶರಭೇಶ್ವರ ಊಟದ ಹೋಟೆಲ್ ನ ಕ್ಯಾಷ್ ಕೌಂಟರ್ ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನ ಇರುವ ಮಹಿಳೆಯರು ಬೇಕಾಗಿದ್ದಾರೆ. ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು.
ಸಂಪರ್ಕಿಸಿ: ಬಸವರಾಜಯ್ಯ ಹಿರೇಮಠ
94489 80070, 78991 90070

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಜಮೀನು ಮಾರಾಟಕ್ಕೆ**
GMIT ಯಿಂದ ಹರಿಹರ ಕಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ HP ಪೆಟ್ರೋಲ್ ಬಂಕ್ ಎದಿರು 1 ಎ.8 ಗುಂ ಜಮೀನು ಮಾರಾಟಕ್ಕೆ ಇದೆ. ಆಸಕ್ತರು ಸಂಪರ್ಕಿಸಿ.
9845382270

**ಮನೆ ಮಾರಾಟಕ್ಕೆ**
ಕುಂದುವಾಡ ಸಮೀಪದ KHB ಕಾಲೋನಿ (ತುಂಗಭದ್ರಾ ಬಡಾವಣೆ) 'ಎ' ಬ್ಲಾಕ್‌ನಲ್ಲಿ ಪೂರ್ವ ಮುಖದ 30×50 (# 307) ಅಳತೆಯ ಮನೆ ಮಾರಾಟಕ್ಕೆ ಇದೆ. ಆಸಕ್ತರು ಸಂಪರ್ಕಿಸಿ :
ಮೊ. : 97434 53481

**ಮನೆ ಬಾಡಿಗೆಗೆ ಇದೆ**
ಗಡಿಯಾರ ಕಂಬದ ಹತ್ತಿರ ಒಕ್ಕಲಿಗರ ಪೇಟೆಯಲ್ಲಿ ಶ್ರೀ ಚೌಡೇಶ್ವರಿ ದೇವಸ್ಥಾನದ ಪಕ್ಕದ ಮನೆ ಬಾಡಿಗೆಗೆ ಇದೆ.
ವಿಚಾರಿಸಿ:
94497 47304

**WANTED**
Salesman/Sales Girls
Assistant Salesman
ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಸ್ಟಾಫ್ ನರ್ಸ್ ಬೇಕಾಗಿದ್ದಾರೆ**
ಸಂಪರ್ಕಿಸಿ :
ಮೊ. 88677-75564

**ತಕ್ಷಣ ಸಂಪರ್ಕಿಸಿರಿ**
ಮಹಿಳೆ-ಪುರುಷ ನುರಿತ ಸೆಕ್ಯೂರಿಟಿ ಗಾರ್ಡ್ಸ್, ಹೌಸ್ ಕೀಪಿಂಗ್, ರೂಂ ಬಾಯ್ಸ್‌ಗಳು ಬೇಕಾಗಿದ್ದಲ್ಲಿ ಸಂಪರ್ಕಿಸಿರಿ. ESI&PF ಸೌಲಭ್ಯವಿರುತ್ತದೆ. ಹೊಲಗದ್ದೆ, ತೋಟ, ಫಾರಂಗಳಲ್ಲಿ, ಹೋಟೆಲ್, ಕಂಪನಿ, ಗಾರ್ಮೆಂಟ್ಸ್‌ಗಳಿಗೆ ಕಾರ್ಮಿಕರು ಬೇಕಾಗಿದ್ದಲ್ಲಿ ಸಂಪರ್ಕಿಸಿರಿ.
88616 05406, 80736 61259

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ಬೇಕಾಗಿದ್ದಾರೆ
ನಮ್ಮಲ್ಲಿ ವಯೋವೃದ್ಧರನ್ನು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಯುವಕ, ಯುವತಿಯರು ಮತ್ತು ವಿಧವೆಯರು ಬೇಕಾಗಿದ್ದಾರೆ. ಆಸಕ್ತಿವುಳ್ಳವರು ಸಂಪರ್ಕಿಸಿ :
63619 46048, 91486 83185

**ಬೇಕಾಗಿದ್ದಾರೆ**
ಬೇಕರಿ ಅಂಗಡಿಯಲ್ಲಿ ಕೌಂಟರ್ ಕೆಲಸಕ್ಕೆ ಹುಡುಗ - ಹುಡುಗಿಯರು ಬೇಕಾಗಿದ್ದಾರೆ. ಚಾಟ್ಸ್ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 98451-54400

**ಬೇಕಾಗಿದ್ದಾರೆ**
ಆಫೀಸ್ ಕೆಸಲಕ್ಕೆ ಕಂಪ್ಯೂಟರ್ ಜ್ಞಾನವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಮಧುರ ಇಂಟೀರಿಯರ್ಸ್
ಹದಡಿ ರಸ್ತೆ, ದಾವಣಗೆರೆ.
94480 28276
70198 33126

**ಮನೆ ಬಾಡಿಗೆಗೆ ಇದೆ**
40×50 ಅಳತೆಯ ಜಾಗದಲ್ಲಿ ಮೇಲ್ ಮಹಡಿಯ ಎರಡು ಬೆಡ್ ರೂಂ ಉಳ್ಳ, ಮನೆಯ ಡೋರ್ ನಂ 1966/67, ಎಸ್. ಎಸ್. 'ಎ' ಬ್ಲಾಕ್, 9ನೇ ಕ್ರಾಸ್ ನಲ್ಲಿ ಇದೆ.
ಮೊ. 9448944470

Earn up to 20000+ (Basic) Bonus+Incentive)
WALK-IN-INTERVIEW
Urgent required
* Relationship Associates (M/F)
* Tele Executives(F) * Data Executive (M)
Education : Min, 10+2 & Above Age Criteria:18.30 years
Fresher's Welcome, Criteria : Young, Energetic, Fluency in Local Language.
Walk In Tnterview with Detailed CV & Recent Photo on October 20-21 2020 at : 11.am to 4 pm
MANJRAK MARKETING LLP
(Corporate Agent of Exide Life Insurance), # 307/102,2nd floor, Murthyappa Complex, Hadadi Road, Davangere-02.
Cell : 08192 232317
96324 56847, 9008091444

**FOR INTERIOR WORKS**
INTERIOR DESIGNING & DECORATIONS, LANDSCAPE DESIGNING, 3D DESIGNING, BUNGLOWS, HOUSES, COMMERCIAL, SCHOOLS, COLLEGE, HOTELS & RESTAURANT
CONTACT:
ANAND GONDKAR , PUNE
C/o.Latest Garments DAVANGERE
PH: 94206 96310

**ಸ್ಮೃತಿ ಮ್ಯಾನ್ ಪವರ್ ಏಜೆನ್ಸೀಸ್ ( ರಿ.)**
ಹೊಲ, ಗದ್ದೆ, ತೋಟ, ಫಾರಂಗಳಲ್ಲಿ ಕೆಲಸ ದೊರೆಯುತ್ತವೆ.
ಹೋಟೆಲ್‌ಗಳಲ್ಲಿ ಸಪ್ಲೈಯರ್, ಕ್ಲೀನರ್, ಅಡುಗೆ ಭಟ್ಟರ ಕೆಲಸ ಖಾಲಿ ಇವೆ.
ಕಂಪನಿ/ಇಂಡಸ್ಟ್ರೀಸ್/ಗಾರ್ಮೆಂಟ್ಸ್‌ಗಳಲ್ಲಿ ಹೆಲ್ಪರ್ ಮತ್ತು ಸೇಲ್ಸ್ ಫೀಲ್ಡ್ ಕೆಲಸಗಳು ದೊರೆಯುತ್ತವೆ. ನಮ್ಮಲ್ಲಿ ಎಲ್ಲಾ ರೀತಿಯ ಶ್ರಮಿಕ ಕಾರ್ಮಿಕರಿಗೆ (ಲೇಬರ್‌ಗಳಿಗೆ) ಸೆಕ್ಯೂರಿಟಿ, ಹೌಸ್ ಕೀಪಿಂಗ್, ರೂಂ ಬಾಯ್ಸ್ ಕೆಲಸಗಳು ದೊರೆಯುತ್ತವೆ.
ಫೋ. : 93433 43363, 98866 43353


# ಮಲೇಬೆನ್ನೂರಿನಲ್ಲಿ ಖರೀದಿ ಕೇಂದ್ರ ಸ್ಥಾಪಿಸಲು ಆಗ್ರಹ

## ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡುವಂತೆ ಹರಿಹರ ತಹಶೀಲ್ದಾರ್‌ಗೆ ರೈತರ ಒತ್ತಾಯ



ಹರಿಹರ, ಅ.19- ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡುವಂತೆ ಹಾಗೂ ಮೆಕ್ಕೆಜೋಳ ಮತ್ತು ಭತ್ತದ ಖರೀದಿ ಕೇಂದ್ರವನ್ನು ಮಲೇಬೆನ್ನೂರು ಗ್ರಾಮದಲ್ಲಿ ತೆರೆಯುವಂತೆ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ತಾಲ್ಲೂಕಿನ ಕೊಕ್ಕನೂರು, ಮಲೇಬೆನ್ನೂರು, ಕೊಮಾರನಹಳ್ಳಿ, ಹಾಲಿವಾಣ, ಕೊಪ್ಪ ಜಿ.ಟಿ. ಕಟ್ಟಿ ಗ್ರಾಮದ ರೈತರು ಶಿವಮೊಗ್ಗ ರಸ್ತೆಯ ಮಾಜೇನಹಳ್ಳಿ ಗ್ರಾಮದೇವತೆ ದೇವಸ್ಥಾನ ದಿಂದ ಮೆರವಣಿಗೆಯೊಂದಿಗೆ ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆ ಸಂಚರಿಸಿ ನಂತರದಲ್ಲಿ ತಹಶೀಲ್ದಾರ್ ಅವರಿಗೆ ಮನವಿ ಅರ್ಪಿಸಿದರು.

ಈ ವೇಳೆ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಮಾತನಾಡಿ, ಅಧಿಕಾರಿಗಳು ಮತ್ತು ರಾಜಕೀಯ ಪಕ್ಷದವರು ಅನಾಮಧೇಯ ಹಣವನ್ನು ಗಳಿಸಿದರೆ ಅವರ ಮಕ್ಕಳು ದುಷ್ಟರಾಗಿ ಹುಟ್ಟುತ್ತಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಅನಾಮಧೇಯ ಹಣವನ್ನು ರೈತರಿಂದ ವಸೂಲಿ ಮಾಡುವ ಪ್ರವೃತ್ತಿಯನ್ನು ಕೈ ಬಿಡಬೇಕು ಎಂದು ಹೇಳಿದರು.

ಹರಿಹರ ತಾಲ್ಲೂಕಿನ ಅನೇಕ ರೈತರು ಗೋಮಾಳ ಹಾಗೂ ಅರಣ್ಯದಲ್ಲಿ ಸುಮಾರು 40 ವರ್ಷಗಳಿಂದ ಬೇಸಾಯ ಮಾಡಿಕೊಂಡು ಬಂದಿದ್ದು ಈ ಬಗ್ಗೆ ಅನೇಕ ಬಾರಿ ಬಗರ್ ಹುಕ್ಕುಂ ಅರ್ಜಿಗಳನ್ನು ಹಾಕಿರುತ್ತಾರೆ. ಸರ್ಕಾರವು ರೈತರಿಗೆ 53 ಮತ್ತು 57 ಫಾರಂ ನಲ್ಲಿ ಅರ್ಜಿ ಹಾಕಿದವರಿಗೆ ಖಾತೆ ಮಾಡಿ ಪಹಣಿ ಕೊಡಲು ಆದೇಶ ಮಾಡಿರುತ್ತದೆ. ಆದರೂ ಸಹ ಕಚೇರಿಯಿಂದ ಯಾವುದೇ ರೀತಿಯ ಬಗರ್ ಹುಕ್ಕುಂ ಸದಸ್ಯರ ಕಮಿಟಿ ರಚನೆಯಾಗಿರುವುದಿಲ್ಲ. ಅಲ್ಲದೇ, ಸಭೆ ನಡವಳಿಕೆ ನಡೆಸಿರುವುದಿಲ್ಲ. ಹಾಗಾಗಿ ಬಗರ್ ಹುಕ್ಕುಂ ಹಕ್ಕು ಪತ್ರಗಳು ಆದಷ್ಟು ಬೇಗನೇ ನೀಡುವಂತಾಗಬೇಕು ಎಂದು ಆಗ್ರಹಿಸಿದರು.

ರೈತ ಸಂಘದ ಹರಿಹರ ತಾಲ್ಲೂಕು ಅಧ್ಯಕ್ಷ ಪಿ.ಮಂಜುನಾಥ್ ಕೋಗಳ್ಳಿ ಮಾತನಾಡಿ, ಮಲೇಬೆನ್ನೂರು ಪಟ್ಟಣದಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶದ ರೈತರಿಗೆ ತಾವು ಬೆಳೆದ ಮೆಕ್ಕೆಜೋಳ ಮತ್ತು ಭತ್ತವನ್ನು ಮಾರಾಟ ಮಾಡಲು ದಾವಣಗೆರೆ ಮತ್ತು ಹರಿಹರ ನಗರಕ್ಕೆ ತೆಗೆದುಕೊಂಡು ಹೋಗಬೇಕಾದ ಪ್ರಸಂಗಗಳು ಇರುವುದರಿಂದ ಇಲ್ಲಿನ ಗ್ರಾಮೀಣ ಪ್ರದೇಶದ ರೈತರಿಗೆ ಬಹಳ ತೊಂದರೆ ಆಗುತ್ತದೆ ಅದನ್ನು ತಪ್ಪಿಸಲು ಮಲೇಬೆನ್ನೂರು ಗ್ರಾಮದಲ್ಲಿ ಖರೀದಿ ಕೇಂದ್ರತೆರೆಯುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಕಬ್ಬಳ ಪ್ರಸಾದ್, ಎಸ್. ಮಂಜುನಾಥ್ ಕೊಕ್ಕನೂರು, ಆನಂದಪ್ಪ, ರಾಮಪ್ಪ, ರಾಜಪ್ಪ, ಗುಡದಹಳ್ಳಿ ಅಡಿವೆಪ್ಪ, ಕೆಂಚಪ್ಪ, ಮಂಜಣ್ಣ ಹನುಮಂತಪ್ಪ, ಅಂಜಿನಪ್ಪ, ನಾಗರಾಜ್ ಮಾಲತೇಶ್ ಇತರರು ಹಾಜರಿದ್ದರು

## ದಾವೆ ಎಚ್ಚರಿಕೆ

**(1ನೇ ಪುಟದಿಂದ)** ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ತಿಳಿಸಿದರು. ಕೇಂದ್ರ ಸರ್ಕಾರವು ಮೆಕ್ಕೆಜೋಳಕ್ಕೆ 1850 ಬೆಂಬಲ ಬೆಲೆ ನಿಗದಿಪಡಿಸಿದೆ. ಆದರೆ ಮಾರುಕಟ್ಟೆಯಲ್ಲಿ ಮೆಕ್ಕೆಜೋಳ 900 ರಿಂದ 1300 ವರೆಗೆ ಮಾತ್ರ ಮಾರಾಟವಾಗುತ್ತಿದೆ. ಇನ್ನು ಸಾಮಾನ್ಯ ಮತ್ತು ಉತ್ತಮ ಭತ್ತಕ್ಕೆ 1868 ರಿಂದ 1888 ಬೆಂಬಲ ಬೆಲೆ ಇದೆ. ಆದರೆ ಮಾರುಕಟ್ಟೆಯಲ್ಲಿ 1400 ರಿಂದ 1550 ರೂ.ಗೆ ಮಾರಾಟವಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ಸಂಘಟನೆಯ ಜಿಲ್ಲಾಧ್ಯಕ್ಷ ಕೆ.ಎಸ್. ಪ್ರಸಾದ್, ಇಟಗಿ ಬಸವರಾಜಪ್ಪ, ಅಣಬೇರು ಕುಮಾರಸ್ವಾಮಿ, ಗೌಡರ ಅಶೋಕ್ ಮಾಯಕೊಂಡ, ಪ್ರತಾಪ್, ಲಿಂಗರಾಜ್ ಪಾಮೇನಹಳ್ಳಿ ಮತ್ತಿತರರು ಸಭೆಯಲ್ಲಿದ್ದರು.

# ರೈತರಿಗೆ ಸಹಾಯ ಹಸ್ತ ನೀಡಲು ಸರ್ಕಾರ ಸಿದ್ಧ



ಹರಪನಹಳ್ಳಿ ಶಾಸಕ ಜಿ.ಕರುಣಾಕರ ರೆಡ್ಡಿ

ಹರಪನಹಳ್ಳಿ, ಅ.19- ರೈತರಿಗೆ ಸಹಾಯ ಹಸ್ತ ನೀಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಿದ್ಧವಿದ್ದು ರೈತರು ಎದೆಗುಂದಬಾರದು ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಹೇಳಿದರು.

ತಾಲ್ಲೂಕಿನ ಸಿಂಗ್ರಿಹಳ್ಳಿ, ತಾವರಗುಂದಿ, ಎನ್.ಬಸಾಪುರ, ನಿಟ್ಟೂರು, ವಟ್ಲಹಳ್ಳಿ, ಹಲುವಾಗಲು ಹಾಗೂ ಇತರೆ ಗ್ರಾಮಗಳ ವ್ಯಾಪ್ತಿಯಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಹೊಲ ಗದ್ದೆಗಳಿಗೆ ನಿನ್ನೆ ಭೇಟಿ ನೀಡಿ ರೈತರ ಕಷ್ಟಗಳಿಗೆ ಅವರು ಸ್ಪಂದಿಸಿದರು.

ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಸಮೀಕ್ಷೆ ನಡೆಸಿರುವ ಅಧಿಕಾರಿಗಳು 82 ಹೆಕ್ಟೇರ್ ಪ್ರದೇಶಗಳಲ್ಲಿ ಭತ್ತದ ಬೆಳೆ ನಷ್ಟವಾಗಿದೆ. ನುಗ್ಗೆ ಬೆಳೆ ಸಹ ಹಾನಿಗೊಳಗಾಗಿದೆ.

ಒಟ್ಟು 94 ಮನೆಗಳು ಮಳೆಯಿಂದ ಹಾನಿಗೊಳಗಾಗಿವೆ. ತಾಲ್ಲೂಕು ಅತಿವೃಷ್ಟಿ ಪ್ರದೇಶವೆಂದು ರಾಜ್ಯ ಸರ್ಕಾರ ಘೋಷಿಸಿರುವ ಪರಿಣಾಮ ರೈತರಿಗೆ ಶೀಘ್ರ ಪರಿಹಾರ ದೊರಕಲಿದೆ. ನೀರಾವರಿ ಬೆಳೆ ಹಾನಿಗೆ ಪ್ರತಿ ಹೆಕ್ಟೇರ್‌ಗೆ ರೂ.13,500, ತೋಟಗಾರಿಕೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.18,000 ಹಾಗೂ ಮಳೆ ಆಶ್ರಿತ ಪ್ರದೇಶದ ಬೆಳೆಗಳಿಗೆ ರೂ. 6,800 ಎಂದು ರಾಜ್ಯ ಸರ್ಕಾರ ಪರಿಹಾರ ಘೋಷಣೆ ಮಾಡಿದೆ. ಸಂಪೂರ್ಣ ಮನೆ ನಾಶವಾಗಿದ್ದರೆ ರೂ. 5 ಲಕ್ಷ ಪರಿಹಾರ ದೊರಕಲಿದೆ. ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಹಾನಿಗೀಡಾದ ರೈತರ ಬೆಳೆಗೆ ಶೀಘ್ರ ಪರಿಹಾರ ದೊರಕಿಸಲು ತ್ವರಿತ ಗತಿಯಲ್ಲಿ ಸಮೀಕ್ಷೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ತಹಶೀಲ್ದಾರ್ ಅನಿಲ್ ಕುಮಾರ್, ಸಹಾಯಕ ಕೃಷಿ ಅಧಿಕಾರಿ ಮಂಜುನಾಥ ಗೊಂದಿ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣಹಾಲಪ್ಪ, ತಾಲ್ಲೂಕು ಪಂಚಾಯಿತಿ ಸದಸ್ಯ ಸಿಂಗ್ರಿಹಳ್ಳಿ ನಾಗರಾಜ, ಮುಖಂಡರಾದ ಎಂ.ಪಿ.ನಾಯ್ಕ್, ಕರೇಗೌಡರು, ಬಾಗಳಿ ಕೊಟ್ರೇಶಪ್ಪ, ಶಿರಗಾನಹಳ್ಳಿ ವಿಶ್ವನಾಥ್, ಯು.ಪಿ.ನಾಗರಾಜ್, ಸಂತೋಷ್ ಹಾಗೂ ಇತರರು ಹಾಜರಿದ್ದರು.

# ಪೀಡಿತರಾಗಿ ವಿರೋಧಿಸುವುದು ಸಲ್ಲ

**(1ನೇ ಪುಟದಿಂದ)** ಹಾಗೂ ಭೂ ಸುಧಾರಣಾ ಕಾಯ್ದೆಗಳ ತಿದ್ದುಪಡಿಯನ್ನು ಸಮಗ್ರ ಚರ್ಚೆಗೊಳಪಡಿಸುವ ಅಗತ್ಯವಿದೆ. ಕಾಯ್ದೆ ಬಗ್ಗೆ ಗೊತ್ತಿಲ್ಲದೇ ಪೂರ್ವಾಗ್ರಹಪೀಡಿತರಾಗಿ ವಿರೋಧಿಸುವುದು ಸರಿಯಲ್ಲ. ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿರುವ ಕಾಯ್ದೆ ತಿದ್ದುಪಡಿಗಳಿಗೆ ರಾಷ್ಟ್ರಪತಿಗಳು ಈಗಾಗಲೇ ಅಂಕಿತ ಹಾಕಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಈ ಕಾಯ್ದೆಗೆ ವ್ಯತಿರಿಕ್ತವಾಗಿ ಬೇರೊಂದು ಕಾಯ್ದೆ ತರುವುದು ದೇಶದ ಸಮಗ್ರತೆ, ಅಖಂಡತೆ, ಐಕ್ಯತೆ ದೃಷ್ಟಿಯಿಂದ ಒಳ್ಳೆಯದಲ್ಲ. ಹೀಗಾಗಿ ರೈತರ ಹಿತ ಕಾಯುವ ನಿಟ್ಟಿನಲ್ಲಿ ಕೆಲ ನಿಯಮ ಸೇರಿಸುವಂತೆ ಸ್ಥಳೀಯ ಸರ್ಕಾರಗಳಿಗೆ ಒತ್ತಾಯಿಸಬೇಕೆಂದು ಸಲಹೆ ನೀಡಿದರು.

ಸಂಘಟನೆಯ ರಾಜ್ಯ ಗೌರವಾಧ್ಯಕ್ಷ ನಿರ್ಮಲ ಕಾಂತ್ ಪಾಟೀಲ್ ಮಾತನಾಡಿ, ರಾಜ್ಯದ ಹಲವು ಜಿಲ್ಲೆಗಳಲ್ಲಿ ನೆರೆ ಹಾವಳಿ ತಲೆದೋರಿದ್ದು, ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಬೆಳೆ ಹಾನಿ, ಆಸ್ತಿ ಹಾನಿ ಸಂಭವಿಸಿದೆ. ಸರ್ಕಾರ ಎಕರೆಗೆ ಕನಿಷ್ಠ 50 ಸಾವಿರ ರೂ. ಪರಿಹಾರ ನೀಡಬೇಕು. ಮನೆ ಕಳೆದುಕೊಂಡವರಿಗೆ ಸೂಕ್ತ ಪುನರ್ವಸತಿ ಒದಗಿಸಬೇಕು. ಕಳೆದ ವರ್ಷ ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿ ಸಂಭವಿಸಿದ ಸಂದರ್ಭದಲ್ಲಿ ಸರ್ಕಾರ ಸೂರು ಕಳೆದುಕೊಂಡವರಿಗೆ 5 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿತ್ತು. ಆದರೆ, ಸರ್ಕಾರ ಇದುವರೆಗೂ ಪೂರ್ಣವಾಗಿ ಹಣ ಮಂಜೂರು ಮಾಡಿಲ್ಲ. ಅದನ್ನು ಕೂಡಲೇ ಮಾಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ಸೋಮನಗುದ್ದು ರಂಗಸ್ವಾಮಿ, ರಾಜ್ಯ ಕಾರ್ಯಾಧ್ಯಕ್ಷ ಸಿದ್ದರಾಮಪ್ಪ, ನಿರ್ಮಲಾಕಾಂತ್ ಪಾಟೀಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ಸುಧೀರ್ ಮಂಡ್ಯ, ಶ್ಯಾಮಸುಂದರ್ ಕೀರ್ತಿ, ರಾಜ್ಯ ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ್, ಉಳ್ಳಪ್ಪ ಒಡೆಯರ್, ಹೆಚ್. ನಾಗರಾಜಪ್ಪ, ರಾಚರೆಡ್ಡಿ, ಅರವಿಂದ ಕುಲಕರ್ಣಿ ಸೇರಿದಂತೆ ಇತರರು ಇದ್ದರು.


## ಪದವಿ ತರಗತಿ ಆರಂಭ ತಯಾರಿ

**(1ನೇ ಪುಟದಿಂದ)** ಆರಂಭಿಸುವುದಕ್ಕೂ, ಸಿನಿಮಾ ಟಾಕೀಸ್‌ಗಳನ್ನು ತೆರೆಯುವುದಕ್ಕೂ ಪರಸ್ಪರ ಹೋಲಿಸುವುದು ಸರಿಯಲ್ಲ. ಪದವಿ ಕಾಲೇಜುಗಳ ಬಗ್ಗೆ ಹೇಳುವುದಾದರೆ, ತರಗತಿ ನಡೆಯುವ ಕೋಣೆಗಳನ್ನು ನಿರಂತರವಾಗಿ ಸ್ಯಾನಿಟೈಸ್ ಮಾಡುತ್ತಿರಬೇಕು. ವಿದ್ಯಾರ್ಥಿಗಳ ಥರ್ಮಲ್ ಸ್ಕ್ರೀನಿಂಗ್ ಮಾಡುತ್ತಲೇ ಇರಬೇಕು. ಪ್ರತಿಕ್ಷಣವೂ ಎಚ್ಚರ ತಪ್ಪುವಂತಿಲ್ಲ ಎಂದವರು ಹೇಳಿದ್ದಾರೆ. ವಿದ್ಯಾರ್ಥಿಗಳು ಮತ್ತು ಬೋಧಕರು, ಮತ್ತಿತರೆ ಸಿಬ್ಬಂದಿಯ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಸುಲಭವಲ್ಲ. ಮುಖ್ಯವಾಗಿ ವೈರಸ್ ನಮ್ಮನಡುವೆಯೇ ಜೀವಂತವಾಗಿ ಓಡಾಡಿಕೊಂಡಿದೆ. ಹೀಗಾಗಿ ಪರಿಸ್ಥಿತಿ ನೋಡಿಕೊಂಡು ಕಾಲೇಜು ಆರಂಭಿಸುತ್ತೇವೆ. ಈ ವಿಷಯದಲ್ಲಿ ಆತುರ ಸಲ್ಲ ಎಂದು ತಿಳಿಸಿದರು.


## ಸಮುದಾಯಕ್ಕೆ '2ಎ' ಮೀಸಲಾತಿ ಕಲ್ಪಿಸಿ

**(1ನೇ ಪುಟದಿಂದ)** ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ಧರ್ಮದರ್ಶಿ ಬಿ.ಸಿ.ಉಮಾಪತಿ, ರಾಣೇಬೆನ್ನೂರು ಶಾಸಕ ಅರುಣ್ ಕುಮಾರ್ ಪೂಜಾರ್, ಪಿ.ಡಿ. ಶಿರೂರ, ಯುವ ಘಟಕದ ನವೀನ್ ಪಾಟೀಲ್ ಮತ್ತಿತರರು ಹಾಜರಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ



ದಿ. ಶ್ರೀ ಕೆ. ಮಲ್ಲಪ್ಪನವರು



ದಿ. ಶ್ರೀ ಜಿ. ವೇದಮೂರ್ತಿ (ಮೂರ್ತ್ಯೆಪ್ಪನವರು)



ದಿ. ಶ್ರೀ ಬಾಳೆಹೊಲದ ಸಿದ್ದೇಶ್‌ರವರು

ಮಾಜಿ ಶಾಸಕರೂ, ಕ್ರೀಡಾ ಪ್ರೋತ್ಸಾಹಕರೂ, ಹಿರಿಯರೂ,
ನಮ್ಮ ಹಿತೈಷಿಗಳೂ ಆದ **ಶ್ರೀ ಕೆ. ಮಲ್ಲಪ್ಪ** ಅವರಿಗೆ
ಮತ್ತು ಶ್ರೀ ವಿನಾಯಕ ರೈಸ್ ಮಿಲ್ ಮಾಲೀಕರೂ, ನಮ್ಮ ಆತ್ಮೀಯರೂ ಆದ
**ಶ್ರೀ ಜಿ. ವೇದಮೂರ್ತಿ (ಮೂರ್ತ್ಯೆಪ್ಪ)** ಅವರಿಗೆ ಮತ್ತು
ನಮ್ಮ ಬಂಧುಗಳಾದ **ಬಾಳೆಹೊಲದ ಶ್ರೀ ಬಿ.ಎಂ. ಸಿದ್ದೇಶ್**
ಅವರುಗಳ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ.
ಅವರುಗಳ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಕರೆಶಿವಪ್ಪ ಶ್ರೀ ರೇವಣಸಿದ್ದಪ್ಪ ಮತ್ತು ಮಕ್ಕಳು, ವರ್ತಕರು, ಎಪಿಎಂಸಿ ಯಾರ್ಡ್, ದಾವಣಗೆರೆ.
✦ ಬಾಳೆಹೊಲದ ಶ್ರೀಮತಿ ಗುರುಸಿದ್ದಮ್ಮ ಮರುಳಸಿದ್ದಪ್ಪ ಮತ್ತು ಮಕ್ಕಳು, ವರ್ತಕರು, ಎಪಿಎಂಸಿ ಯಾರ್ಡ್,
✦ ಬಾಳೆಹೊಲದ ಶ್ರೀಮತಿ ಗೌರಮ್ಮ ಜಯಣ್ಣ ಮತ್ತು ಮಕ್ಕಳು
✦ ಬಾಳೆಹೊಲದ ಶ್ರೀ ರೇವಣಸಿದ್ದಪ್ಪ (ಸಿದ್ದಪ್ಪ), ವರ್ತಕರು, ಚೌಕಿಪೇಟೆ,
✦ ಶ್ರೀ ಆನಂದ ಮತ್ತು ಮಕ್ಕಳು, ವರ್ತಕರು, ಚೌಕಿಪೇಟೆ,
✦ ಬಾಳೆಹೊಲದ ಶ್ರೀ ಪ್ರಕಾಶ್, ನಾಗರಾಜ ಮತ್ತು ಮಕ್ಕಳು
✦ ಬಾಳೆಹೊಲದ ಶ್ರೀಮತಿ ಅನಸೂಯಮ್ಮ ಶೇಖರಪ್ಪ ಮತ್ತು ಮಕ್ಕಳು
✦ ಬಾಳೆಹೊಲದ ಶ್ರೀಮತಿ ರೇವಮ್ಮ ವಿರೂಪಾಕ್ಷಪ್ಪ ಮತ್ತು ಮಕ್ಕಳು, ಅಳಿಯಂದಿರು,
✦ ಬಾಳೆಹೊಲದ ಶ್ರೀ ಸಿದ್ದಲಿಂಗಪ್ಪ ಮತ್ತು ಮಕ್ಕಳು, ವರ್ತಕರು, ದಾವಣಗೆರೆ.
✦ ಬಾಳೆಹೊಲದ ಶ್ರೀ ಭರ್ಮನಗೌಡ್ರು ಮತ್ತು ಮಕ್ಕಳು ✦ ಕರೆಶಿವಪ್ಪ ಶ್ರೀ ಭರ್ಮಪ್ಪ ಮತ್ತು ಮಕ್ಕಳು, ಹರಿಹರ.
✦ ಕರೆಶಿವಪ್ಪ ಶ್ರೀ ನಾಗಲಿಂಗಪ್ಪ ಮತ್ತು ಮಕ್ಕಳು, ಅಳಿಯಂದಿರು
✦ ಕರೆಶಿವಪ್ಪ ಶ್ರೀ ಬಸಣ್ಣ ಮತ್ತು ಮಕ್ಕಳು, ಕೆ.ಹೆಚ್.ಬಿ. ಕಾಲೋನಿ
✦ ಕರೆಶಿವಪ್ಪ ಶ್ರೀ ಶೇಖರಪ್ಪ ಮತ್ತು ಮಕ್ಕಳು ✦ ಕರೆಶಿವಪ್ಪ ಶ್ರೀ ಬಸವರಾಜು, ಈಶ್ವರಪ್ಪ ಮತ್ತು ಮಕ್ಕಳು, ವರ್ತಕರು
✦ ಕರೆಶಿವಪ್ಪ ಶ್ರೀ ಕೆ.ಸಿ. ಧರಣೇಂದ್ರಪ್ಪ, ಕೆ.ಸಿ.ಪ್ರಕಾಶ್ ಹಾಗೂ ಮಕ್ಕಳು, ವರ್ತಕರು
✦ ಕರೆಶಿವಪ್ಪ ಶ್ರೀ ಜಯ್ಯಣ್ಣ ಮತ್ತು ಮಕ್ಕಳು ✦ ತೆಲಗಿ ಶ್ರೀ ಜಯಣ್ಣ ಮತ್ತು ಸಹೋದರರು, ಮಕ್ಕಳು
✦ ಕರೆಶಿವಪ್ಪ ಶ್ರೀ ಮಂಜುನಾಥ , ವರ್ತಕರು, ಎಪಿಎಂಸಿ ಯಾರ್ಡ್, ದಾವಣಗೆರೆ.


**JOB OPPORTUNITIES**
Sr. Sales Officers - Mortgage Loans
Qualification : Any Graduates
Contact : Bajaj Finance Ltd.
Opp. Aruna Talkies, P.B. Road,
Mob. 76762 87815

**Wanted**
Marketing Executive For Filed Work.
Kalpataru Plywoods
1st Main Road, S.Nijalingappa layout Davanagere.
94483 41142

**ಭೂಮಿಕಾ ಮ್ಯಾಟ್ರಿಮೋನಿ**
ಲಿಂಗಾಯತ
ವಧು-ವರರ ಕೇಂದ್ರ
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು
ದಿ. 21-10-2020ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**CHANGE OF NAME**
I T. Raju S/o. Thippanna (Old name) resident Bamboo Bazar, Davangere -1. I have changed my name as T. RAAJU (New Name) vide affidevit dated as 19.10.2020 Davangere sworn before Notary.
T. RAAJU

**CHANGE OF NAME**
I Smt. Priyanka W/o. Ananda B. (Old name) resident Bamboo Bazar, Davangere -577001. I have changed my name as PRIYANKAA R. (New Name) vide affidevit dated as 19.10.2020 Davangere sworn before Notary.
Smt. PRIYANKAA

**CHANGE OF NAME**
I Manjula B. W/o. T. Raaju (Old name) resident Bamboo Bazar, Davangere -1. I have changed my name as MANJULAA B. (New Name) vide affidevit dated as 19.10.2020 Davangere sworn before Notary.
Smt. MANJULAA B.

**ಸುವರ್ಣಾವಕಾಶ**
ಬಂಡವಾಳವಿಲ್ಲದೆ ದಿನಕ್ಕೆ 2 ಗಂಟೆ ಕೆಲಸ ಮಾಡಿ ತಿಂಗಳಿಗೆ 20 ರಿಂದ 30 ಸಾವಿರ ಸಂಪಾದಿಸುವ ಅವಕಾಶ SSLC ಪಾಸಾಗಿರುವ 30 ವರ್ಷ ಮೇಲ್ಪಟ್ಟವರು ಕರೆ ಮಾಡಿ.
ಫೋ. : 99009 19091


**Home Tuition Available**
For all Subjects till Class 10th, Economics tuition available for College Students & Government Exam aspirants
Contact : 86183 24082

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**SSLC, PUC**
ಪಾಸ್/ಫೇಲ್ ಮುಂದೇನು?
ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್ 6 ತಿಂಗಳ ಟ್ರೈನಿಂಗ್ ನಂತರ ನರ್ಸ್ ಕೆಲಸ.
ನೇರ ಪರೀಕ್ಷೆಗಳು : NTC, SSLC, PUC
ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಫೋ. : 86602 35013


**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869


## ಎರೇಬೂದಿಹಾಳ್ ಗ್ರಾಮದ ಎಂ. ಮಹಾದೇವಯ್ಯ ನಿಧನ



ಹರಿಹರ ತಾ. ಎರೇಬೂದಿಹಾಳ್ ಗ್ರಾಮದ ವಾಸಿ, ಗುಂಟನೂರು ಮಠದ
**ವೇ || ಎಂ. ಮಹಾದೇವಯ್ಯ** (86 ವರ್ಷ)
ಅವರು ದಿನಾಂಕ 19.10.2020ರ ಸೋಮವಾರ ಸಾಯಂಕಾಲ 5.45ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸಹೋದರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 20.10.2020 ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಎರೇಬೂದಿಹಾಳ್ ಗ್ರಾಮದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖಿತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ಬಸಮ್ಮ ಮತ್ತು ಮಕ್ಕಳು ಹಾಗೂ ಸಹೋದರರು. ಮೊ: 63632 44080, 99720 75696

## ಜೆ.ಎಸ್. ಖಾದರ್ ಅಲಿ ನಿಧನ



ದಾವಣಗೆರೆ ಆಂಜನೇಯ ಬಡಾವಣೆ, 10ನೇ ಕ್ರಾಸ್ ವಾಸಿ, ದಿ|| ಜಗಳೂರು ಸುಭಾನ್‌ಸಾಬ್ ಇವರ ಪುತ್ರ ಜೆ.ಎಸ್. ಖಾದರ್ ಅಲಿ (53) ಅವರು ದಿನಾಂಕ 19.10.2020ರ ಸೋಮವಾರ ಸಂಜೆ 4.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.10.2020ರ ಸೋಮವಾರ ರಾತ್ರಿ 10 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಿತು.

## ನಿರೀಕ್ಷೆ ಹುಸಿ

**(1ನೇ ಪುಟದಿಂದ)** ತೀವ್ರ ವಿರೋಧ ಬಂದ ನಂತರ ಕಂದಾಯ ಸಚಿವ ಆರ್. ಅಶೋಕ್, ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಸೇರಿದಂತೆ ಕೆಲವು ಸಚಿವರು ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಸಮೀಕ್ಷೆ ಮತ್ತು ಪರಿಹಾರ ಕಾಮಗಾರಿ ಕೈಗೊಳ್ಳುತ್ತಿದ್ದಾರೆ.


ಕೇಂದ್ರ ಸರ್ಕಾರದಿಂದ ಇದುವರೆಗೂ ಪರಿಹಾರ ರೂಪದಲ್ಲಿ ಒಂದು ಪೈಸೆಯೂ ಬಂದಿಲ್ಲ. ನಮ್ಮಲ್ಲಿರುವ ಹಣದಲ್ಲೇ ಪರಿಹಾರ ಕಾಮಗಾರಿ ಕೈಗೊಳ್ಳುತ್ತಿದ್ದೇವೆ ಎಂದು ಕಂದಾಯ ಸಚಿವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಬಳಿ 650 ಕೋಟಿ ರೂ.ಗಳಿಗೂ ಹೆಚ್ಚು ಹಣವಿದ್ದು, ಅದನ್ನು ಪರಿಹಾರ ಕಾಮಗಾರಿಗಳಿಗೆ ಬಳಕೆ ಮಾಡಿಕೊಳ್ಳಬಹುದೆಂದು ತಿಳಿಸಿದ್ದಾರೆ.

## ಹರಿಹರದಲ್ಲಿ ಅಪರಿಚಿತ ವೃದ್ಧೆಯ ಶವ ಪತ್ತೆ

ಹರಿಹರ, ಅ.19- ಇಲ್ಲಿನ ರಾಘವೇಂದ್ರ ಮಠದ ಹತ್ತಿರ ಮಳಿಗೆಯ ಮುಂಭಾಗದಲ್ಲಿ ಸುಮಾರು 60 ವರ್ಷ ವಯಸ್ಸಿನ ಅಪರಿಚಿತ ವೃದ್ಧೆಯ ಶವ ಇಂದು ಪತ್ತೆಯಾಗಿದೆ. ಕೆಂಪು ಬಣ್ಣದ ಜಾಕೆಟ್, ಹಸಿರು ಸೀರೆ ಧರಿಸಿರುತ್ತಾಳೆ. ಸಂಬಂಧಪಟ್ಟವರು ಹರಿಹರ ಪೊಲೀಸ್ ಠಾಣೆ (ದೂರವಾಣಿ 08192-272016) ಯನ್ನು ಸಂಪರ್ಕಿಸಬಹುದು.

## ನಗರ ದೇವತೆಗಿಂದು ವೀಣಾ ವಾಹನ ಅಲಂಕಾರ


ಶ್ರೀದೇವಿಗೆ ಚಂದ್ರಘಂಟಾ ಅಲಂಕಾರ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಇಂದಿನ ನವರಾತ್ರಿ ಉತ್ಸವದಲ್ಲಿ ಶ್ರೀ ದೇವಿಗೆ ವೀಣಾ ವಾಹನ ಅಲಂಕಾರ ಮಾಡಲಾಗುತ್ತದೆ. ನಾಳೆ ಸರಸ್ವತಿ ಅಲಂಕಾರ ಇರುತ್ತದೆ.

## ತುಳಜಾ ಭವಾನಿ ದೇವಸ್ಥಾನದಲ್ಲಿ ದಸರಾ ಉತ್ಸವ



ದಾವಣಗೆರೆ ಕೆಟಿಜೆ ನಗರ 11ನೇ ಕ್ರಾಸ್ ನಲ್ಲಿರುವ ಶ್ರೀ ತುಳಜಾ ಭವಾನಿ ದೇವ ಸ್ಥಾನದಲ್ಲಿ ನವರಾತ್ರಿ ಮಹೋತ್ಸವ ಆರಂಭಗೊಂಡಿದ್ದು, ಇದೇ ದಿನಾಂಕ 26ರವರೆಗೆ ಜರುಗಲಿದೆ. ಇದೇ ದಿನಾಂಕ 23ರ ಶುಕ್ರವಾರ ಚಂಡಿಕಾ ಹೋಮ ನಡೆಯಲಿದೆ.

## ನೀಟ್ : ಹರೀಶ್‌ಗೆ 1815ನೇ ರ್‍ಯಾಂಕ್




ದಾವಣಗೆರೆ, ಅ.19- ರಾಷ್ಟ್ರಮಟ್ಟದ ನೀಟ್ 2020ರ ಪರೀಕ್ಷೆಯಲ್ಲಿ ನಗರದ ಭದ್ರಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಹರೀಶ್ ನಾಯಕ್ ಆಲ್ ಇಂಡಿಯಾ 1815 ನೇ ರ್‍ಯಾಂಕ್ ಪಡೆದಿದ್ದಾರೆ. ಹರೀಶ್ ಅವರ ಸಾಧನೆಗೆ ಭದ್ರಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪ್ರೊ|| ಸಿ.ಹೆಚ್. ಮುರುಗೇಂದ್ರಪ್ಪ, ಕಾರ್ಯದರ್ಶಿ ಎಂ.ಸಂಕೇತ್ ಅಭಿನಂದಿಸಿದ್ದಾರೆ.

ಬೇಕಾಗಿದ್ದಾರೆ
ನಮ್ಮ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್/ಗರ್ಲ್ಸ್ ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ
ರವಿತೇಜ ಟೆಕ್ಸ್ ಟೈಲ್ಸ್ ಮೊ.: 89703 23033

ನ್ಯೂ ಎಂ.ಜಿ.ಎಸ್. ಜ್ಯುಯಲರ್ಸ್
ಬೆಳ್ಳಿ-ಬಂಗಾರದ ಅಂಗಡಿ
EXCLUSIVE SHOW ROOM FOR 91.6% HALLMARK JEWELLERY
ನಾಡಿನ ಸಮಸ್ತ ಜನತೆಗೆ ದಸರಾ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು
ನಂ. 635/2, ಆನಂದ ಬುಕ್ ಡಿಪೋ ಎದುರು, ಮಂಡಿಪೇಟೆ ರಸ್ತೆ, ದಾವಣಗೆರೆ
ದಸರಾ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿ
ಯಾವುದೇ ತರಹದ ಬಂಗಾರದ ಆಭರಣಗಳ ಮೇಲೆ ವೇಸ್ಟೇಜ್ ಹಾಗೂ ಮಜೂರಿ ಇರುವುದಿಲ್ಲ.
ತೂಕ X ದರ
ಒಮ್ಮೆ ಭೇಟಿ ಕೊಟ್ಟು ದರ ಪರಿಶೀಲಿಸಿ
ನಮ್ಮಲ್ಲಿ ಆಭರಣ ಖರೀದಿಸಿ ಹಾಗೂ ವಿಜಯಯೋತ್ಸವದ ಲಕ್ಕಿ ಡ್ರಾ ಕೂಪನ್ ಉಚಿತವಾಗಿ ಪಡೆಯಿರಿ
ಅದೃಷ್ಟ ನಿಮ್ಮದು ಕೊಡುಗೆ ನಮ್ಮದು
ವಿಜಯವಾಣಿ
ದಿಗ್ವಿಜಯ 24X7 NEWS
ಬಂಪರ್ ಬಹುಮಾನ
2900
17th Oct - 27th Nov 2020
ರೆಫ್ರಿಜರೇಟರ್
ravimgs35@gmail.com
* Terms & Condition Apply
Manidipet Road, DAVANGERE Ph.: 08192 - 231951 9448929897, 9481308777

Laghu Udyog Bharathi-Karnataka (LUB-K) & Karnataka Udyog Mitra (KUM)
in association with
लघु उद्योग भारती
यूनियन बैंक Union Bank of India
Andhra Corporation
Karnataka Udyog Mitra
Present an ONLINE WEBINAR on
EASE OF DOING BUSINESS
DAVANAGERE DISTRICT
Wednesday | October 21, 2020 | 4.30 - 6.00 PM
Introducing the new Industrial Policy, Labour and Land reforms of the Govt. of Karnataka & new reforms of Ease of Doing Business and Banking Support by the Govt. of India to support MSME's post-Covid.
KEY SPEAKERS


Shri Gowdar Mallikarjunappa Siddeshwara
Hon'ble Member of Parliament, Govt. of India


Shri Mahantesh Belagi, IAS
Deputy Commissioner & District, Magistrate, Davanagere District


Shri Revanna Gowda
Managing Director, Karnataka Udyog Mitra


Shri P S Srikanta Dutta
President, Laghu Udyog Bharathi-Karnataka



Shri B Sreenivasa Rao
Field General Manager, Union Bank Of India


Shri Venkatesh
General Manager, Karnataka State Finance Corporation


Shri Raj Prakash
AVP, Ernst & Young, Knowledge Partner, Karnataka Udyog Mitra

Inviting all MSME Business Owners & Entrepreneurs
Webinar Link: https://bit.ly/35aJOUm
Event supported by: SHOW CRAFT
updates@lubkarnataka.org | +91-98451 62308

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಕೆ. ಸಿದ್ದಲಿಂಗನಗೌಡ್ರು, ಯು.ಬೇವಿನಹಳ್ಳಿ
ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರು, ಉಚ್ಚಂಗಿದುರ್ಗ.
ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ದಿನಾಂಕ: 19.10.2020ನೇ ಸೋಮವಾರ ಸಂಜೆ 4:30 ಗಂಟೆಗೆ ಶ್ರೀ ಕೆ. ಸಿದ್ದಲಿಂಗನಗೌಡ್ರು (78 ವರ್ಷ) ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯು ದಿನಾಂಕ 20.10.2020ನೇ ಮಂಗಳವಾರ ಸ್ವಗ್ರಾಮ ಯು.ಬೇವಿನಹಳ್ಳಿಯಲ್ಲಿ ನೆರವೇರುವುದು.

ಶ್ರೀ ಕೆ. ಸಿದ್ದಲಿಂಗನಗೌಡ್ರು ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇವೆ. ತಮ್ಮ ಅಗಲಿಕೆಯು ನಮಗೆ ಅತೀವ ದುಃಖವನ್ನು ತಂದಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಮತ್ತು ಕುಟುಂಬ ವರ್ಗಕ್ಕೆ ನಿಮ್ಮ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ದುಃಖತಪ್ತರು
ಶ್ರೀ ಕೆ. ಕೆಂಚನಗೌಡ್ರು ಮತ್ತು ಸಹೋದರರು, ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು, ಯು.ಬೇವಿನಹಳ್ಳಿ
ಶ್ರೀ ರೇವಣಸಿದ್ದೇಶ್ವರ ಸ್ಟೋನ್ ಕ್ರಷರ್, ಯು.ಬೇವಿನಹಳ್ಳಿ, ಹರಪನಹಳ್ಳಿ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte